CC

# 2008

## GENERAL STUDIES

### Paper 1

*Time : 3 Hours ]* *[ Maximum Marks : 300*

---

## INSTRUCTIONS

*Each question is printed both in English and in Kannada. If any confusion arises in the Kannada version, please refer to the English Version of the questions.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt questions from all Parts.*

*The number of marks carried by each question is indicated with the question.*

*The length of the answers should not, as far as possible, exceed the specification given for the question.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಹಿಂಬದಿ ಪುಟದಲ್ಲಿ ಮುದ್ರಿಸಲಾಗಿದೆ.

## PART A

1. Answer any ***two*** of the following questions in not more than 200 – 250 words each : *20×2=40*

   (a) Discuss the nature of the Revolt of 1857.

   (b) Explain the programme and the methods of work of the early nationalists of the Indian National Congress.

   (c) Critically evaluate the social reforms with special reference to emancipation of women in Mysore state between 1881 and 1900.

   (d) Trace the various dimensions and facets of Backward Class Movements in Karnataka.

2. Answer any ***four*** of the following questions in about 100 – 120 words each : *10×4=40*

   (a) Summarize the challenge thrown by the Gadhar revolutionaries to colonialism.

   (b) Do you agree with the view that the scheme of constitutional changes introduced in 1909 Act was designed as a milestone in the 'divide and rule' strategy ?

   (c) Highlight the work of Swarajists in the National Movement during 1922 – 1925.

   (d) Major part of Dewan Mirza Ismail's administration was spent in suppressing the popular agitations in Mysore. Comment.

   (e) Briefly explain the significance of 'Mysore Chalo' movement.

   (f) Summarize the literary development in Karnataka during the post-Independence days.

## ಭಾಗ A

1. ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ತಲಾ 200 ರಿಂದ 250 ಪದಗಳಿಗೆ ಮೀರದಂತೆ ಉತ್ತರಿಸಿ. *20×2=40*

   (a) 1857 ರ ದಂಗೆಯ ಸ್ವರೂಪವನ್ನು ಕುರಿತು ಚರ್ಚಿಸಿ.

   (b) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಆರಂಭದ ರಾಷ್ಟ್ರವಾದಿಗಳ ಕಾರ್ಯಕ್ರಮ ಮತ್ತು ಕಾರ್ಯನಿರ್ವಾಹಣೆಯ ವಿಧಾನಗಳನ್ನು ವಿವರಿಸಿ.

   (c) ಮಹಿಳಾ ವಿಮೋಚನೆಗೆ ವಿಶೇಷ ಗಮನ ಕೊಟ್ಟು, 1881 ರಿಂದ 1900 ರ ನಡುವಿನ ಅವಧಿಯಲ್ಲಿ ಮೈಸೂರು ರಾಜ್ಯದಲ್ಲಿ ನಡೆದ ಸಾಮಾಜಿಕ ಸುಧಾರಣೆಗಳನ್ನು ವಿಮರ್ಶಾತ್ಮಕವಾಗಿ ನಿರೂಪಿಸಿ.

   (d) ಕರ್ನಾಟಕದ ಹಿಂದುಳಿದ ವರ್ಗದ ಚಳುವಳಿಗಳ ವಿವಿಧ ಆಯಾಮಗಳನ್ನು ಹಾಗೂ ಮಜಲುಗಳನ್ನು ಗುರುತಿಸಿ.

2. ಕೆಳಗಿನ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ ಸುಮಾರು 100 – 120 ಪದಗಳಷ್ಟಿರಬೇಕು : *10×4=40*

   (a) ವಸಾಹತುಶಾಹಿಯ ವಿರುದ್ಧ ಗದರ್ ಕ್ರಾಂತಿಕಾರಿಗಳು ಎಸೆದ ಸವಾಲುಗಳ ಮುಖ್ಯಾಂಶಗಳನ್ನು ನಿರೂಪಿಸಿ.

   (b) 1909 ರ ಕಾಯಿದೆಯಲ್ಲಿ ಜಾರಿಗೆ ತರಲಾದ ಸಂವಿಧಾನಾತ್ಮಕ ಬದಲಾವಣೆಗಳ ಯೋಜನೆಯನ್ನು "ಒಡೆದು ಆಳುವ" ಕಾರ್ಯತಂತ್ರದ ಮೈಲಿಗಲ್ಲಾಗುವಂತೆ ರೂಪಿಸಲಾಗಿದ್ದಿತು ಎಂಬ ಅಭಿಪ್ರಾಯವನ್ನು ನೀವು ಒಪ್ಪುತ್ತೀರಾ ?

   (c) 1922 – 1925 ರ ಅವಧಿಯ ರಾಷ್ಟ್ರೀಯ ಚಳುವಳಿಯಲ್ಲಿ ಸ್ವರಾಜ್ಯವಾದಿಗಳ ಕಾರ್ಯದ ಮುಖ್ಯಾಂಶಗಳನ್ನು ತಿಳಿಸಿ.

   (d) ದಿವಾನ್ ಮಿರ್ಜಾ ಇಸ್ಮಾಯಿಲ್‌ರ ಆಡಳಿತದ ಬಹುತೇಕ ಕಾಲವು ಮೈಸೂರು ರಾಜ್ಯದ ಜನತಾ ಪ್ರತಿಭಟನೆಗಳನ್ನು ಹತ್ತಿಕ್ಕುವುದರಲ್ಲೆ ಕಳೆದು ಹೋಯಿತು. ಇದರ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.

   (e) 'ಮೈಸೂರು ಚಲೋ' ಚಳುವಳಿಯ ಮಹತ್ವವನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

   (f) ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಕರ್ನಾಟಕದ ಸಾಹಿತ್ಯ ಬೆಳವಣಿಗೆಯ ಮುಖ್ಯಾಂಶಗಳನ್ನು ನಿರೂಪಿಸಿ.

3. Answer any ***two*** of the following questions in about 50 – 60 words each : *5×2=10*

(a) Write a note on the 'Safety Valve Theory' related to the foundation of the Indian National Congress.

(b) What were the socio-economic factors responsible for the genesis of communalism in India in the 19th century ?

(c) Write a note on the Belgaum Session (1924) of the Congress.

4. Write brief notes on ***all*** of the following in about 20 – 25 words each : *2×5=10*

(a) Rabindranath Tagore

(b) R.I.N. Revolt

(c) I.N.A. Trials

(d) Kengal Hanumanthaiya

(e) Koot Rebellion

3. ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ತಲಾ 50 – 60 ಪದಗಳಿಗೆ ಮೀರದಂತೆ ಉತ್ತರಿಸಿ : *5×2=10*

   (a) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಗೆ ಸಂಬಂಧಿಸಿದ 'ಸುರಕ್ಷಣಾ ಕವಾಟ ಸಿದ್ಧಾಂತ'ದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

   (b) 19ನೇ ಶತಮಾನದಲ್ಲಿ ಭಾರತದಲ್ಲಿ ಮತೀಯವಾದದ ಹುಟ್ಟಿಗೆ ಕಾರಣವಾದ ಸಮಾಜೋ-ಆರ್ಥಿಕ ಅಂಶಗಳು ಯಾವುವು ?

   (c) ಬೆಳಗಾವಿಯಲ್ಲಿ ನಡೆದ (1924 ರಲ್ಲಿ) ಕಾಂಗ್ರೆಸ್ ಅಧಿವೇಶನ ಕುರಿತು ಟಿಪ್ಪಣಿ ಬರೆಯಿರಿ.

4. ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ತಲಾ 20 ರಿಂದ 25 ಪದಗಳಿಗೆ ಮೀರದಂತೆ ಟಿಪ್ಪಣಿ ಬರೆಯಿರಿ : *2×5=10*

   (a) ರವೀಂದ್ರನಾಥ ಠಾಕೂರ್

   (b) R.I.N. ದಂಗೆ

   (c) I.N.A. ವಿಚಾರಣೆಗಳು

   (d) ಕೆಂಗಲ್ ಹನುಮಂತಯ್ಯ

   (e) ಕೂಟ್ ಪ್ರತಿಭಟನೆ

## PART B

5. Answer any ***three*** of the following questions in about 200 – 250 words each :

*20×3=60*

(a) Examine the implications of global economic crisis on Indian GDP growth in general and IT industry in specific.

(b) Right to Information Act is best seen as an attempt to bring awareness and transparency in governance among general public. Comment and justify.

(c) Critically examine the poverty alleviation programmes of India.

(d) Discuss the measures taken by Government of Karnataka in recent years to rectify regional imbalance.

(e) Indian poverty shown on screen can fetch Oscars. Comment.

(f) Critically examine the problems faced by farmers of Karnataka and illustrate your answer with decrease in agricultural productivity.

6. Answer any ***five*** of the following questions in about 100 – 120 words each :

*10×5=50*

(a) Discuss the implications of the proposed Greater Bangalore Authority on the city infrastructure.

(b) Highlight the objectives of National Rural Employment Guarantee Act.

(c) Explain the present power scenario of Karnataka and comment on the anomalies.

(d) Highlight the recommendations of National Knowledge Commission.

(e) Examine the implications of Tribal Act of India on forest and wildlife conservation.

(f) Highlight the objectives of Right to Education Bill.

(g) Critically examine the need and significance of private – public partnership projects.

(h) 'Corporate governance at cross-roads' — Illustrate the event with Satyam episode.

## ಭಾಗ B

5. ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 200 ರಿಂದ 250 ಪದಗಳಿಗೆ ಮೀರದಂತಿರಬೇಕು : *20×3=60*

   (a) ಜಾಗತಿಕ ಆರ್ಥಿಕ ಬಿಕ್ಕಟ್ಟು, ಒಟ್ಟಾರೆಯಾಗಿ ಭಾರತದ GDP ಬೆಳವಣಿಗೆಯ ಮೇಲೆ ಮತ್ತು ನಿರ್ದಿಷ್ಟವಾಗಿ IT ಕೈಗಾರಿಕೆಯ ಮೇಲೆ ಬೀರಿರುವ ಪರಿಣಾಮಗಳನ್ನು ಪರಿಶೀಲಿಸಿ.

   (b) ಮಾಹಿತಿ ಅರಿವಿನ ಹಕ್ಕು ಕಾಯಿದೆಯನ್ನು, ಆಡಳಿತದ ಬಗ್ಗೆ ಸಾರ್ವಜನಿಕರಲ್ಲಿ ಜಾಗ್ರತಿ ಮೂಡಿಸುವ ಮತ್ತು ಪಾರದರ್ಶಕತೆಯನ್ನು ತರುವ ಪ್ರಯತ್ನ ಎಂದು ಭಾವಿಸಬಹುದು. ಇದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿ ಹಾಗೂ ಸಮರ್ಥಿಸಿ.

   (c) ಭಾರತದಲ್ಲಿ ನಡೆದಿರುವ ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಬಗ್ಗೆ ವಿಮರ್ಶಾತ್ಮಕವಾಗಿ ಪರಿಶೀಲಿಸಿ.

   (d) ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸುವ ಬಗ್ಗೆ ಕರ್ನಾಟಕ ಸರ್ಕಾರವು ಇತ್ತೀಚಿನ ವರ್ಷಗಳಲ್ಲಿ ಕೈಗೊಂಡಿರುವ ಕ್ರಮಗಳನ್ನು ಕುರಿತು ಚರ್ಚಿಸಿ.

   (e) ಭಾರತದ ಬಡತನವನ್ನು ಪರದೆಯ ಮೇಲೆ ತೋರಿಸಿದರೆ ಆಸ್ಕರ್ ಗಳಿಸಬಹುದು. ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ ?

   (f) ಕರ್ನಾಟಕದ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ಮತ್ತು ಕೃಷಿ ಉತ್ಪಾದಕತೆಯು ಇಳಿಮುಖವಾಗಿರುವ ಸಂದರ್ಭದಲ್ಲಿ ನಿಮ್ಮ ಉತ್ತರ ಬರೆಯಿರಿ.

6. ಕೆಳಗಿನ ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರ 100 ರಿಂದ 120 ಪದಗಳ ಮಿತಿಯಲ್ಲಿರಬೇಕು : *10×5=50*

   (a) ಬೃಹತ್ ಬೆಂಗಳೂರು ಪ್ರಾಧಿಕಾರದ ಪ್ರಸ್ತಾವನೆಯಿಂದ ನಗರದ ಮೂಲಸೌಕರ್ಯ ರಚನೆಗಳ ಮೇಲೆ ಆಗಿರುವ ಪರಿಣಾಮಗಳ ಬಗ್ಗೆ ಚರ್ಚಿಸಿ.

   (b) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಮುಖ್ಯ ಧ್ಯೇಯಗಳನ್ನು ತಿಳಿಸಿ.

   (c) ಕರ್ನಾಟಕದ ಪ್ರಸ್ತುತ ವಿದ್ಯುತ್ ಪರಿಸ್ಥಿತಿಯನ್ನು ವಿವರಿಸಿ ಮತ್ತು ಇದರಲ್ಲಿನ ತಪ್ಪುಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

   (d) ರಾಷ್ಟ್ರೀಯ ಜ್ಞಾನ ಆಯೋಗದ ಶಿಫಾರಸುಗಳ ಮುಖ್ಯಾಂಶಗಳನ್ನು ತಿಳಿಸಿ.

   (e) ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ಮೇಲೆ ಭಾರತದ ಬುಡಕಟ್ಟು ಕಾಯಿದೆಯ ಪರಿಣಾಮವನ್ನು ಕುರಿತು ಬರೆಯಿರಿ.

   (f) ಶಿಕ್ಷಣದ ಹಕ್ಕು ಮಸೂದೆಯ ಮುಖ್ಯ ಧ್ಯೇಯಗಳ ಬಗ್ಗೆ ವಿವರಿಸಿರಿ.

   (g) ಖಾಸಗಿ-ಸಾರ್ವಜನಿಕ ಸಹಭಾಗಿತ್ವ ಪರಿಯೋಜನೆಗಳ ಅಗತ್ಯ ಮತ್ತು ಪ್ರಾಮುಖ್ಯತೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

   (h) 'ಕವಲುದಾರಿಯಲ್ಲಿ ಕಾರ್ಪೋರೇಟ್ ಆಡಳಿತ' ಸತ್ಯಮ್ ಘಟನೆಯ ಹಿನ್ನೆಲೆಯಲ್ಲಿ ಈ ಅಂಶವನ್ನು ವಿವರಿಸಿ.

7. Answer/write short notes on, any ***six*** of the following questions in about 50 – 60 words each : *5×6=30*

(a) Special Economic Zones

(b) Pseudo secularism obstructing anti-terrorism efforts

(c) Virtual technology

(d) Justify India's claims to a seat in the Security Council.

(e) National river lining project

(f) Can you account for the near collapse of the Public Distribution System in most of the States ?

(g) Why do you think the total ban on smoking in public places is not very effective ?

(h) What is NINJNA ?

8. Write brief notes on ***all*** of the following in about 20 – 25 words each : *2×10=20*

(a) Micro-credit groups

(b) Core banking system

(c) Rain Water Harvesting

(d) A.R. Rehman

(e) Minimum Support Price

(f) Major Sandeep Unnikrishnan

(g) Datta Peeta tradition

(h) Kodava culture

(i) Moral policing

(j) 'White Tiger'

7. ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಉತ್ತರಿಸಿ/ಟಿಪ್ಪಣಿ ಬರೆಯಿರಿ. ಉತ್ತರಗಳು ತಲಾ 50 – 60 ಪದಗಳ ಮಿತಿಯಲ್ಲಿರಬೇಕು : *5×6=30*

(a) ವಿಶೇಷ ಆರ್ಥಿಕ ವಲಯಗಳು.

(b) ಮಿಥ್ಯ ಜಾತ್ಯತೀತವಾದದಿಂದ ಭಯೋತ್ಪಾದಕ ವಿರೋಧಿ ಪ್ರಯತ್ನಗಳಿಗೆ ಅಡಚಣೆ.

(c) ವಾಸ್ತವಿಕ (Virtual) ತಂತ್ರಜ್ಞಾನ.

(d) ಭದ್ರತಾ ಮಂಡಳಿಯಲ್ಲಿ ಸ್ಥಾನ ಪಡೆಯಲು ಭಾರತ ಮಾಡುತ್ತಿರುವ ಅಹವಾಲನ್ನು ಸಮರ್ಥಿಸಿ.

(e) ನದಿಜೋಡಣೆಯ ರಾಷ್ಟ್ರೀಯ ಪರಿಯೋಜನೆ.

(f) ಬಹುತೇಕ ರಾಜ್ಯಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಹೆಚ್ಚೂ ಕಡಿಮೆ ಕುಸಿದು ಬಿದ್ದಿದೆ ಎಂಬುದನ್ನು ಸಮರ್ಥಿಸುವಿರಾ ?

(g) ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಿದ್ದು ಅಷ್ಟೇನೂ ಪರಿಣಾಮಕಾರಿಯಾಗಿಲ್ಲ ಎಂಬ ಅಭಿಪ್ರಾಯಕ್ಕೆ ಕಾರಣಗಳೇನು ?

(h) NINJNA ಎಂದರೇನು ?

8. ಈ ಕೆಳಗಿನವುಗಳಿಗೆ ಎಲ್ಲಕ್ಕೂ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಉತ್ತರ 20 – 25 ಪದಗಳ ಮಿತಿಯಲ್ಲಿರಬೇಕು : *2×10=20*

(a) ಚಿಕ್ಕ ಉದ್ಧರಿ ಗುಂಪುಗಳು

(b) ಕ್ರೋಢ ಬ್ಯಾಂಕಿಂಗ್ ವ್ಯವಸ್ಥೆ

(c) ಮಳೆನೀರಿನ ಕೊಯ್ಲು

(d) ಎ.ಆರ್. ರೆಹಮಾನ್

(e) ಕನಿಷ್ಠ ಬೆಂಬಲ ಬೆಲೆ

(f) ಮೇಜರ್ ಸಂದೀಪ್ ಉನ್ನಿಕೃಷ್ಣನ್

(g) ದತ್ತ ಪೀಠ ಪರಂಪರೆ

(h) ಕೊಡವ ಸಂಸ್ಕೃತಿ

(i) ನೀತಿಯ ಕಾವಲುಗಾರಿಕೆ

(j) ಬಿಳಿ ಹುಲಿ (White tiger)

## PART C

9. (a) Explain the construction and uses of the following diagrams : *4*

(i) Histogram

(ii) Pie-chart

(b) Following data relate to the amount spent on import and export by a country for the period from 1991 to 1998 :

| Year | Import (in crores of Rs.) | Export (in crores of Rs.) |
|---|---|---|
| 1991 | 28·3 | 42·8 |
| 1992 | 34·7 | 51·3 |
| 1993 | 62·9 | 70·4 |
| 1994 | 95·1 | 82·4 |
| 1995 | 78·4 | 65·7 |
| 1996 | 85·3 | 93·8 |
| 1997 | 92·5 | 112·4 |
| 1998 | 107·4 | 128·5 |

Plot a time-series graph to the above data and comment on your observations. *8*

(c) The amount of income-tax paid by a sample 125 employees of a company is summarized in the following frequency distribution :

| Income tax paid (in '000 Rs.) | No. of employees |
|---|---|
| 0 – 5 | 12 |
| 5 – 10 | 29 |
| 10 – 15 | 36 |
| 15 – 20 | 23 |
| 20 – 25 | 11 |
| 25 – 30 | 8 |
| 30 – 35 | 4 |
| 35 – 40 | 2 |

## ಭಾಗ C

9. (a) ಕೆಳಗಿನ ರೇಖಾಚಿತ್ರಗಳ ರಚನೆ ಮತ್ತು ಉಪಯೋಗಳನ್ನು ವಿವರಿಸಿ : 4

   (i) ಹಿಸ್ಟೋಗ್ರಾಂ

   (ii) ಪೈ-ಚಾರ್ಟ

(b) ಈ ಕೆಳಕಂಡ ದತ್ತಾಂಶವು, 1991 ರಿಂದ 1998 ರ ಅವಧಿಯವರೆಗೆ ಒಂದು ದೇಶವು ಆಮದು ಮತ್ತು ರಫ್ತುಗಳಿಗಾಗಿ ವಿನಿಯೋಗಿಸಿದ ಮೊಬಲಗಿಗೆ ಸಂಬಂಧಿಸಿದೆ :

| ವರ್ಷ | ಆಮದು (ಕೋಟಿ ರೂ. ಗಳಲ್ಲಿ) | ರಫ್ತು (ಕೋಟಿ ರೂ. ಗಳಲ್ಲಿ) |
|---|---|---|
| 1991 | 28·3 | 42·8 |
| 1992 | 34·7 | 51·3 |
| 1993 | 62·9 | 70·4 |
| 1994 | 95·1 | 82·4 |
| 1995 | 78·4 | 65·7 |
| 1996 | 85·3 | 93·8 |
| 1997 | 92·5 | 112·4 |
| 1998 | 107·4 | 128·5 |

ಮೇಲಿನ ದತ್ತಾಂಶಕ್ಕೆ ಕಾಲ-ಸರಣಿ ಗ್ರಾಫನ್ನು ರಚಿಸಿ ಮತ್ತು ನಿಮ್ಮ ಅವಲೋಕನಗಳನ್ನು ಕುರಿತು ಅಭಿಪ್ರಾಯ-ತಿಳಿಸಿ. 8

(c) ಒಂದು ಕಂಪನಿಯ ಮಾದರಿ 125 ಉದ್ಯೋಗಿಗಳು ಸಂದಾಯಮಾಡಿದ ಆದಾಯ ತೆರಿಗೆ ಮೊಬಲಗಿನ ಸಾರಾಂಶವನ್ನು ಕೆಳಕಂಡ ಆವರ್ತ ವಿತರಣೆಯಲ್ಲಿ ನಿರೂಪಿಸಲಾಗಿದೆ :

| ಸಂದಾಯಮಾಡಿದ ಆದಾಯ-ತೆರಿಗೆ ('000 ರೂ.ಗಳಲ್ಲಿ) | ಉದ್ಯೋಗಿಗಳ ಸಂಖ್ಯೆ |
|---|---|
| 0 – 5 | 12 |
| 5 – 10 | 29 |
| 10 – 15 | 36 |
| 15 – 20 | 23 |
| 20 – 25 | 11 |
| 25 – 30 | 8 |
| 30 – 35 | 4 |
| 35 – 40 | 2 |

(i) Draw the less than cumulative frequency curve.

(ii) Determine the median, lower quartile and upper quartile.

(iii) What is the income-tax level above which 15% of the employees fall ? *8*

**10.** (a) A batsman finds that by scoring a half century in the $6^{th}$ innings of his test matches he has bettered his average of the previous 5 innings by 3 runs. What is his average after the $6^{th}$ innings ? *4*

(b) For the data given below on related variables x and y

(i) draw a scatter diagram,

(ii) compute the coefficient of correlation, and

(iii) interpret clearly the results in (i) and (ii).

| x : | 110 | 100 | 140 | 120 | 80 | 90 |
|---|---|---|---|---|---|---|
| y : | 70 | 60 | 80 | 60 | 10 | 20 |

*2+6+2=10*

(c) In how many different ways can the following be done ?

(i) Selection of 2 books from 6 different books.

(ii) Arrangement of the letters of the word 'SATYAM'.

(iii) Construction of a two-digited even number using the digits 0, 1, 2, 3, 4, 5, without repeating any digit. *2×3=6*

(i) ಸಂಚಿತಕ್ಕಿಂತ ಕಡಿಮೆಯ ಆವರ್ತ ವಕ್ರವನ್ನು ಬರೆಯಿರಿ.

(ii) ಮೀಡಿಯನ್, ಕೆಳಗಿನ ಚತುರ್ಥಾಂಶ ಮತ್ತು ಮೇಲಿನ ಚತುರ್ಥಾಂಶಗಳನ್ನು ನಿರ್ಧರಿಸಿ.

(iii) ಯಾವ ಆದಾಯ ತೆರಿಗೆ ಮಟ್ಟಕ್ಕೆ ಮೇಲೆ 15% ಉದ್ಯೋಗಿಗಳು ಒಳಪಡುತ್ತರೆ ? *8*

**10.** (a) ತನ್ನ ಟೆಸ್ಟ್ ಪಂದ್ಯಗಳ 6 ಇನಿಂಗ್ಸ್‌ನಲ್ಲಿ ಅರ್ಧ ಶತಕ ಗಳಿಸುವ ಮೂಲಕ, ತನ್ನ ಹಿಂದಿನ 5 ಇನಿಂಗ್ಸ್‌ಗಳ ಸರಾಸರಿಯನ್ನು 3 ರನ್‌ಗಳಿಂದ ಉತ್ತಮ ಪಡಿಸಿಕೊಂಡಿರುವುದನ್ನು ಒಬ್ಬ ಬ್ಯಾಟ್ಸಮನ್ ಕಂಡುಕೊಳ್ಳುತ್ತಾನೆ. 6 ಇನಿಂಗ್ಸ್ ನಂತರ ಆತನ ಸರಾಸರಿ ಎಷ್ಟು ? *4*

(b) ಸಂಬಂಧಿತ x ಮತ್ತು y ಗಳಿಗೆ ಕೆಳಗೆ ಕೊಟ್ಟಿರುವ ದತ್ತಾಂಶಕ್ಕೆ

(i) ಒಂದು ಚೆದುರು ರೇಖಾಕೃತಿಯನ್ನು ಬರೆಯಿರಿ,

(ii) ಸಹಸಂಬಂಧಿ ಗುಣಾಂಕವನ್ನು ಎಣಿಕೆಮಾಡಿ, ಮತ್ತು

(iii) (i) ಹಾಗೂ (ii) ರ ಫಲಿತಾಂಶಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿ.

| x : | 110 | 100 | 140 | 120 | 80 | 90 |
|---|---|---|---|---|---|---|
| y : | 70 | 60 | 80 | 60 | 10 | 20 |

*2+6+2=10*

(c) ಈ ಕೆಳಗಿನವನ್ನು ಎಷ್ಟು ವಿವಿಧ ರೀತಿಗಳಲ್ಲಿ ಮಾಡಲು ಸಾಧ್ಯ :

(i) 6 ವಿವಿಧ ಪುಸ್ತಕಗಳಿಂದ 2 ಪುಸ್ತಕಗಳನ್ನು ಆಯ್ಕೆ ಮಾಡುವುದು.

(ii) SATYAM ಎಂಬ ಪದದ ಅಕ್ಷರಗಳ ಜೋಡಣೆ.

(iii) ಯಾವುದೇ ಅಂಕಿಯ ಪುನರಾವರ್ತನವಿಲ್ಲದೆ 0, 1, 2, 3, 4, 5 ಅಂಕಿಗಳನ್ನು ಬಳಸಿ ಎರಡು ಅಂಕಿಗಳ ಸಮಸಂಖ್ಯೆಯ ರಚನೆ. *2×3=6*